

# ಪಠ್ಯಪುಸ್ತಕಗಳ ಹೊರೆ ತಗ್ಗಿಸಬಹುದೇ?

ಮಂಜುನಾಥ ಬೆಸ್ತರ, ಮಗಿಮಾವಿನಹಳ್ಳಿ

ಖಂಡಿತ ಹೌದು, ಪುಟ್ಟಮಕ್ಕಳ ಪಠ್ಯಪುಸ್ತಕಗಳ ಹೊರೆಯನ್ನು ತಗ್ಗಿಸಬಹುದು. ಬೇಬಿ ಸಿಟ್ಟಿಂಗ್, ಪ್ರೀಕೆಜಿ, ಎಲ್‌ಕೆಜಿ, ಯುಕೆಜಿಯಲ್ಲಿ ಅಭ್ಯಾಸ ಮಾಡುವ ಮಕ್ಕಳು ತಮ್ಮ ವಯಸ್ಸಿಗೂ ಮೀರಿದ ತೂಕದ ಪಠ್ಯ ಮತ್ತು ನೋಟ್ ಪುಸ್ತಕಗಳನ್ನು ಹೊತ್ತು ಒಯ್ಯುತ್ತಿದ್ದಾರೆ. ಈ ಎಳೆ ವಯಸ್ಸಿನಲ್ಲಿ ಮಕ್ಕಳು ಕಟ್ಟಿಕೊಳ್ಳಬೇಕಾದ ಜ್ಞಾನ ಈ ಪಠ್ಯದಲ್ಲಿರುತ್ತದೆಯೇ? ಆದಾಗ್ಯೂ ಪಠ್ಯದಲ್ಲಿ ಜ್ಞಾನ ಇದೆ ಎಂದೇ ಭಾವಿಸೋಣ. ಅದನ್ನು ಮಕ್ಕಳು ಹೇಗೆ ಜೀರ್ಣಿಸಿಕೊಳ್ಳಬಲ್ಲರು? ಪಠ್ಯ ತಾನಾಗಿಯೇ ಮಗುವಿಗೆ ತೆರೆದುಕೊಳ್ಳುತ್ತದೆಯೇ? ಇಲ್ಲವಲ್ಲ! ಅದು ಒಂದು ಮಾಹಿತಿ ಕಣಜ ಮಾತ್ರ. ಅದು ಪಠ್ಯದಲ್ಲೂ ಸಿಗುತ್ತದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲೂ ಸಿಗುತ್ತದೆ. ಆದರೆ ಪಠ್ಯ ಒಂದು ಚೌಕಟ್ಟನ್ನು ಒದಗಿಸಬಹುದು ಅಷ್ಟೇ.

ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ಒಂದು ವಿಷಯವನ್ನು ಮಗು  ತಾನಾಗಿಯೇ ಕಲಿತುಕೊಳ್ಳುವುದಿಲ್ಲ. ಬದಲಾಗಿ ಯಾರಾದರೂ ಒಬ್ಬರೂ ಆ ಕುರಿತು ಅನುಭವ ನೀಡಬೇಕು. ಅದು ಶಿಕ್ಷಕ, ಸಹಪಾಠಿ, ಸ್ನೇಹಿತ, ನೆರೆಹೊರೆಯವರು, ತಂದೆ-ತಾಯಿ, ಅಕ್ಕ-ತಂಗಿ, ಪಾಲಕರು ಯಾರೂ ಆಗಿರಬಹುದು. ಹೀಗೆ ಮಗುವಿನ ಸುತ್ತಮುತ್ತ ಇರುವವರಲ್ಲಿ ಯಾರೋ ತಮಗರಿವಿಲ್ಲದಂತೆ ಮಗುವಿನ ಬೇಕು ಬೇಡಗಳನ್ನು ಪೂರೈಸುತ್ತಾರೆ. ಈ ಸಂದರ್ಭದಲ್ಲಿ ಮಗು, ತನ್ನ ಅಗತ್ಯತೆ ಹೇಗೆ ಈಡೇರಿತು ಎಂಬುದನ್ನು ಕುತೂಹಲದಿಂದ ಗಮನಿಸುತ್ತದೆ. ಅದನ್ನೇ ಪುನಃ ತನ್ನ ಅಗತ್ಯತೆಗೆ ಬಳಕೆ ಮಾಡಿ ನೋಡುತ್ತದೆ.

ಉದಾಹರಣೆಗೆ ಮಗುವಿಗೆ ಒಂದು ಚಾಕಲೇಟ್ ಬೇಕಾಗಿದೆ ಎಂದಿಟ್ಟುಕೊಳ್ಳೋಣ. ಯಾರನ್ನು ಕೇಳಿದರೆ ಸಿಗುತ್ತದೆ ಎಂದು ಯೋಚಿಸಿ, ಅವರಿಗೆ ಬೇಡಿಕೆ ಸಲ್ಲಿಸುತ್ತದೆ. ಅದು ವರ್ಕೌಟ್ ಆಗದಿದ್ದರೆ ಮತ್ತೊಂದು ವಿಧಾನದಲ್ಲಿ ಇನ್ನೊಬ್ಬರನ್ನು ಕೇಳಿ ಪಡೆದುಕೊಳ್ಳುತ್ತದೆ. ಈ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸಿ. ಮಗು ತನಗೆ ಬೇಕಾದ ಅಗತ್ಯವನ್ನು ಪೂರೈಸಿಕೊಳ್ಳಲು ಮತ್ತೆ ಮತ್ತೆ ಪ್ರಯತ್ನಿಸಿ, ನಿರೀಕ್ಷಿತ ಫಲವನ್ನು ಪಡೆದುಕೊಳ್ಳುತ್ತದೆ. ಈ ಅನುಭವವನ್ನು ಮನೋವಿಜ್ಞಾನಿ ಕೋಹ್ಲರ್ ಮತ್ತು ಗೆಸ್ಟಾಲ್ಟ್ ರವರ ಒಳನೋಟ ಕಲಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ. ಮಗು ಯಾವುದೇ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಿ, ಅದನ್ನು ಇಡೀಯಾಗಿ ಗ್ರಹಿಸುತ್ತದೆ. ತನಗಿರುವ ಪರಿಮಿತಿಯಲ್ಲಿ ಏನೇನು ಸಾಧ್ಯತೆಗಳಿವೆ ಎಂಬುದನ್ನು ಯೋಚಿಸುತ್ತದೆ. ಅದಕ್ಕೆ ಪೂರಕವಾದ ಪ್ರಯತ್ನಗಳನ್ನು ಮಾಡುವುದರ ಮೂಲಕ ಅಂತಿಮ ಮತ್ತು ನಿರೀಕ್ಷಿತ ಫಲ ಪಡೆದುಕೊಳ್ಳುತ್ತದೆ.

ಇದನ್ನು ಮಗು ಕಲಿಯುವ ಶಾಲಾ ವಾತಾವರಣದ ಜೊತೆ ತುಲನೆ ಮಾಡಿ ನೋಡೋಣ. ಮಗು ತಾನಾಗಿಯೇ ಕಲಿತುಕೊಳ್ಳುವುದಿಲ್ಲ, ಬದಲಾಗಿ ಶಿಕ್ಷಕರು ಮಗುವಿನ ಕಲಿಕೆಗೆ ಬೇಕಾದ ಬೆಂಬಲ, ಮಾರ್ಗದರ್ಶನ ಮತ್ತು ಅನುಕೂಲ ಮಾಡಿಕೊಡುತ್ತಾರೆ. ಹಾಗಾದರೆ ಪಠ್ಯ ಏತಕ್ಕಾಗಿ ಬೇಕು? ಯಾರಿಗಾಗಿ ಬೇಕು? ಎಲ್ಲಿ ಬೇಕು? ಈ ಸರಳ ಪ್ರಶ್ನೆಗಳನ್ನು ಪರಿಶೀಲಿಸುವುದಾದರೆ, ಪಠ್ಯ ಅಗತ್ಯವಿರುವುದು ಶಿಕ್ಷಕ ಅಥವಾ ಬೋಧಕ ಎಂದು ಯಾರನ್ನು ನಾವು ಕರೆಯುತ್ತೇವೆಯೋ ಅವರಿಗೆ. ಏಕೆಂದರೆ ಮಗುವಿನ ವಯೋಮಾನಕ್ಕೆ ತಕ್ಕುದಾದ ಕಲಿಕಾ ಚಟುವಟಿಕೆಗಳನ್ನು ಕಲಿಸುವವರು ಅವರು. ಯಾವ ಕಲಿಕಾಂಶವನ್ನು ಎಷ್ಟು ವ್ಯಾಪ್ತಿಯಲ್ಲಿ ಹೇಳಿಕೊಡಬೇಕು ಎಂಬ ಪ್ರಶ್ನೆಗಳಿಗೆ ಪಠ್ಯವು ನಿರ್ದಿಷ್ಟ ಚೌಕಟ್ಟನ್ನು ಒದಗಿಸುತ್ತದೆ. ಇದರ ಹೊರತಾಗಿ ಅಭ್ಯಾಸ ಅಥವಾ ಓದುವ ಕಾರ್ಯಕ್ಕೆ ಪಠ್ಯಪುಸ್ತಕ ಬೇಕು. ಓದುವ ಕೌಶಲವನ್ನು ಮಕ್ಕಳಲ್ಲಿ ಬೆಳೆಸಲು ಪಠ್ಯಪುಸ್ತಕವೇ ಅಂತಿಮವಲ್ಲ. ಈ ಉದ್ದೇಶಕ್ಕೆಂದೇ ಶಾಲೆಯಲ್ಲಿ ಗ್ರಂಥಾಲಯ, ವಾಚನಾಲಯ, ಓದುವ ಮೂಲೆ (Reading corner), ರೀಡಿಂಗ್ ಕಿಟ್, ಮ್ಯಾಥ್ಸ್ ಕಿಟ್ ಇತ್ಯಾದಿ ಕಾರ್ಯಯೋಜನೆಗಳು ಜಾರಿಯಾಗಿವೆ ಮತ್ತು ಚಾಲ್ತಿಯಲ್ಲಿವೆ.

ಇನ್ನು ಪಠ್ಯಪುಸ್ತಕ ಬೇಕು ಎನ್ನುವ ಪಾಲಕರು ಒಮ್ಮೆ ಯೋಚಿಸಬೇಕು. ಮಗು ಮನೆಯಲ್ಲಿ ಓದಬೇಕು, ಹೋಮ್‌ವರ್ಕ್ ಮಾಡಬೇಕು, ಹೀಗಾಗಿ ಇದರ ಅಗತ್ಯವಿದೆ ಎಂದು ಇವರು ಪ್ರತಿಪಾದಿಸುತ್ತಾರೆ. ಒಮ್ಮೆ ಯೋಚಿಸಿ, ಮಗು ಪ್ರತಿದಿನ ಸಾಕಷ್ಟು ಸಮಯವನ್ನು ಶಾಲೆಯಲ್ಲಿ ಕಳೆದಿರುತ್ತದೆ. ಹಾಗೂ ಬಹಳಷ್ಟು ವಿಷಯಗಳನ್ನು ಶಾಲಾ ಅವಧಿಯಲ್ಲಿ ಕಲಿತಿರುತ್ತದೆ. ಮನೆಗೆ ಬಂದ ಮೇಲೂ ಮತ್ತೆ ಓದು-ಬರಹದಲ್ಲಿಯೇ ತೊಡಗಿಕೊಳ್ಳಬೇಕು ಎಂದು ಅಪೇಕ್ಷಿಸುವುದು ಎಷ್ಟು ಸರಿ?

ಒಮ್ಮೆ ನಮ್ಮನ್ನು ನಾವು ಅವಲೋಕಿಸಿಕೊಳ್ಳೋಣ. ಒಂದು ಕೆಲಸವನ್ನು ಎಷ್ಟು ಅವಧಿ ಮಾಡುತ್ತೇವೆ? ಅರ್ಧಗಂಟೆ ಅಥವಾ ಒಂದು ಗಂಟೆ. ಜೊತೆಗೆ ನಾವು ಮಾಡುವ ಕೆಲಸದಲ್ಲಿ ಬದಲಾವಣೆ ಇದ್ದೇ ಇರುತ್ತದೆ. ಅಡುಗೆ ಮಾಡುವವರು ಒಂದೇ ಕೆಲಸವನ್ನು ಬಹಳ ಎಂದರೆ ಒಂದು ತಾಸು ಮಾಡಬಹುದು. ವ್ಯವಸಾಯ ಮಾಡುವವರು ನಿರಂತರವಾಗಿ ಎರಡು ತಾಸು ಒಂದೇ ಕೆಲಸ ಮಾಡಬಹುದು. ಕಚೇರಿಗೆ ಹೋಗುವವರು ಭಿನ್ನವಾದ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಮಧ್ಯೆ ಒಂದು ಸೂಕ್ಷ್ಮ ವಿಚಾರ. ಈ ಎಲ್ಲ ಕೆಲಸಗಳು ಒಂದು ಸೀಮಿತ ಅವಧಿಯಲ್ಲಿ ಮುಗಿದು ಮುಂದಿನ ದಿನಕ್ಕೆ ಪಲ್ಲಟಗೊಳ್ಳುತ್ತವೆ. ವಯಸ್ಕರಾದ ನಾವುಗಳೇ ಹೀಗೆ ನಾಳೆಗೆ ಎಂದು ಮೀಸಲಿಟ್ಟು ಕೈಚೆಲ್ಲುತ್ತೇವೆ. ಆದರೆ ಶಾಲೆಗೆ ಹೋಗುವ ಕಂದಮ್ಮಗಳು, ಬಾಲ್ಯದ ಕುತೂಹಲ ಗರಿಗೆದರುವ ವಯೋಮಾನದಲ್ಲಿ ಬೆಳಗಿನಿಂದ ರಾತ್ರಿ ಮಲಗುವವರೆಗೂ ಕೇವಲ ಓದು-ಬರಹದ ಚಟುವಟಿಕೆಗಳಲ್ಲಿಯೇ ತೊಡಗಿಸಿಕೊಳ್ಳಬೇಕು ಎಂಬುದು ಎಷ್ಟರ ಮಟ್ಟಿಗೆ ಸರಿ?

## ಪರಿಹಾರ ಹೇಗೆ?

ಮಗು ಶಾಲೆಗೆ ಹೋಗುವುದು ಸಾಮಾಜಿಕ ಹೊಂದಾಣಿಕೆಯ ಕೌಶಲವನ್ನು ಕಟ್ಟಿಕೊಳ್ಳಲು. ಇದಕ್ಕಾಗಿ ಶಾಲೆಯನ್ನೇ ಅವಲಂಬಿಸಬೇಕು ಎಂದೇನಿಲ್ಲ; ಆದರೆ ಶಾಲೆಯಲ್ಲಿ ಸಮವಯಸ್ಕರು, ಸಮಾನ ಅಭಿರುಚಿಯುಳ್ಳ ಮಕ್ಕಳು ಒಂದೆಡೆ ಇರುವುದರಿಂದ ಕಲಿಕೆಯ ಸಾಧ್ಯತೆಗಳು ಹೆಚ್ಚು.



ಶಾಲೆಯಲ್ಲಿ ಓದು-ಬರಹದಂತಹ ನಿರ್ದಿಷ್ಟ ಕೌಶಲಗಳನ್ನು ಬೆಳೆಸಿಕೊಳ್ಳಲು ಪಠ್ಯವನ್ನು ದಿನನಿತ್ಯ ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ಹೊರುವ ಅಗತ್ಯವಿಲ್ಲ. ಈ ಚಟುವಟಿಕೆಗೆ ಶಾಲೆಯಲ್ಲಿ ಹೆಚ್ಚು ಅವಕಾಶಗಳಿರುವುದರಿಂದ ಶಾಲೆಯಲ್ಲಿಯೇ ಪಠ್ಯಪುಸ್ತಕ ಮತ್ತು ನೋಟ್ ಪುಸ್ತಕಗಳನ್ನು ಇಡುವುದು ಸೂಕ್ತ. ಒಂದು ದಿನಚರಿ ಪುಸ್ತಕ, ಊಟದ ಕ್ಯಾರಿಯರ್ ಮತ್ತು ನೀರಿನ ಬಾಟಲ್ ತೆಗೆದುಕೊಂಡು ಬಂದರೆ ಸಾಕು, ಇದೇ ಪುಟ್ಟ ಮಕ್ಕಳಿಗೆ ಭಾರವಾಗುತ್ತದೆ.

ಹಾಗಾದರೆ ಮಕ್ಕಳಿಗೆ ಹೋಮ್‌ವರ್ಕ್ ಬೇಡವೇ? ಹೋಮ್ ವರ್ಕ್ ಇಲ್ಲದಿದ್ದರೆ ಕಲಿಯುವುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ನಮ್ಮಲ್ಲಿಯೇ ಇದೆ. ಬಹುತೇಕ ಮಕ್ಕಳ ಹೋಮ್ ವರ್ಕ್‌ನ್ನು ಪಾಲಕರೇ ಮಾಡುತ್ತಿದ್ದಾರೆ ಇಲ್ಲವೆ ಕೈಹಿಡಿದು ಬರೆಸುತ್ತಾರೆ. ಇನ್ನೂ ಮುಂದುವರಿದು ಹೇಳುವುದಾದರೆ ಎಡಗೈಯಿಂದ ಬರೆದು ಕಳಿಸುತ್ತಾರೆ.

ಮಗು ಆಲೋಚಿಸುವಂತಹ, ಅನ್ವಯ ಮಾಡಿಕೊಳ್ಳುವಂತಹ, ಹೋಲಿಕೆ-ವ್ಯತ್ಯಾಸ ಮಾಡುವಂತಹ, ಸುತ್ತಮುತ್ತಲಿನ ಪರಿಸರವನ್ನು ಗಮನಿಸುವಂತಹ, ತನ್ನ ಸುತ್ತಲಿನ ಮನೆ, ಮರಗಿಡಗಳನ್ನು ಸಮೀಕ್ಷೆ ಮಾಡುವಂತಹ, ಮನೆಯ ಹಿರಿಯರಿಂದ ಮಾಹಿತಿ ಸಂಗ್ರಹಿಸುವಂತಹ, ಸುದ್ದಿಪತ್ರಿಕೆಗಳನ್ನು ಸಂಗ್ರಹಿಸುವಂತಹ, ಅಂಚೆ ಕಚೇರಿ, ಗ್ರಾಮದ ಗ್ರಂಥಾಲಯ, ಗ್ರಾಮ ಪಂಚಾಯಿತಿ ಇತ್ಯಾದಿ ಕಚೇರಿಗಳಿಗೆ ಭೇಟಿ ನೀಡುವ ಕೆಲಸಗಳನ್ನು, ಮಾದರಿಗಳನ್ನು ತಯಾರಿಸಿಕೊಂಡು ಬರುವಂತಹ ಚಟುವಟಿಕೆಗಳನ್ನು ನಿತ್ಯ ಕಾರ್ಯದಲ್ಲಿ ಮಾಡುತ್ತ, ಮಾಡಿ-ಕಲಿ ತತ್ವದಂತೆ ಜೀವನ ಅನುಭವಗಳನ್ನು ಮಾಡಿ-ನೋಡಿ, ಪರಿಶೀಲಿಸಿ ಕಲಿಯುವಂತೆ ಮಾಡಬೇಕು. ಆಗ ಮಗು ಕೂಡ ಉಲ್ಲಾಸದಾಯಕ ಮನಸ್ಥಿತಿಯಿಂದ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತದೆ. ಈ ಎಲ್ಲ ಚಟುವಟಿಕೆಗೆ ಪಠ್ಯಪುಸ್ತಕ-ನೋಟ್ ಪುಸ್ತಕದ ಹೊರೆ ಬೇಕಿಲ್ಲ ಎಂಬುದನ್ನು ಗಮನಿಸಬೇಕು.